



## ಅಪರೂಪವಾದ ಬಾನುಲಿ

80ರ ದಶಕದ ಕಾಲದಲ್ಲಿ ದೂರದರ್ಶನಕ್ಕಿಂತಲೂ ಮುಂಚೆ ನಮ್ಮ ಜೀವನಾಡಿಯಾಗಿದ್ದದ್ದು ಆಕಾಶವಾಣಿ. ಇದು ತನ್ನ ಬಾನುಲಿ ಕೇಂದ್ರದಿಂದ ಬಿತ್ತರಿಸುತ್ತಿದ್ದ ಕಾರ್ಯಕ್ರಮಗಳಾದ ವಾರ್ತೆಗಳನ್ನು ನಮಗೆ ತಲುಪಿಸುತ್ತಿದ್ದದ್ದು ರೇಡಿಯೊ. ಅದಿಂದು ಪರೂಪವಾಗಿದೆ. ಆಗಿನ ಕಾಲದಲ್ಲಿ ವಾರ್ತೆಯನ್ನು ಕೇಳುವುದೇ ಸೊಗಸಾಗಿತ್ತು. ಇಂದು ಪ್ರತಿಕ್ಷಣದ ಮಾಹಿತಿಯು ಸುದ್ದಿವಾಹಿನಿಗಳಲ್ಲಿ ಬಿತ್ತರವಾದರೂ ಆಗಿನ ಕಾಲದ ಹಿತಕರ ಅನುಭವ ಈಗ ಸಿಗುತ್ತಿಲ್ಲ. ಚಿತ್ರದಲ್ಲಿ ಕಾಣುತ್ತಿರುವ ರೇಡಿಯೊ ಸಿಕ್ಕಿದ್ದು ಬಾಗಲಕೋಟೆಯ ಹುನಗುಂದ ತಾಲ್ಲೂಕಿನ ಧನ್ನೂರಿನಲ್ಲಿ. ಗ್ರಾಮದ ಲಿಂಗಪ್ಪ ಹುದ್ದಾರ ಅವರ ಮನೆಯಲ್ಲಿ ದೀಪಾವಳಿಗೆ ಸುಣ್ಣಬಣ್ಣ ಹಚ್ಚಲು ಸ್ವಚ್ಛತಾ ಕಾಯಕದಲ್ಲಿದ್ದಾಗ ಕಣ್ಣಿಗೆ ಬಿತ್ತು.

–ಮಹಾಂತೇಶ ಬಾಗೇವಾಡಿ, ಬಾದಾಮಿ

## ತುರಿಕೆ ಬೀನ್ಸ್

ಬೀನ್ಸ್ ತರಹದ ಕಾಯಿಗೆ ಕಂದು ಬಣ್ಣದ, ಮೇಲಿಂದ ವೆಲ್ವೆಟ್ ಹೊದಿಕೆ ಅಂಟಿಸಿದಂತೆ ಕಾಣುವ ಈ ಕಾಯಿಗೆ ಮೈತುಂಬಾ ಕೂದಲು. ಮುಟ್ಟಿದರೆ, ಮುಟ್ಟಿದ ಜಾಗದಲ್ಲಿ ಕೆರೆತ ಶುರುವಾಗುತ್ತದೆ. ಬಳ್ಳಿಗೆ ಗೊಂಚಲಾಗಿ ಬಿಡುವ ಕಾಯಿಗೆ ತುರಿಕೆ ಕಾಯಿ, ಕಪಿಕಚ್ಛು, ಮಂಗನ ಕಾಯಿ, ತೊರ್ಸಣಿಗೆ ಕಾಯಿ ಮೊದಲಾದ ಹೆಸರುಗಳಿವೆ. ಒಮ್ಮೆ ಇದರ ತುರಿಕೆಯ ಅನುಭವ ಪಡೆದವರು ರೋಮಗಳಿಂದ ಕೂಡಿದ ಬೀನ್ಸ್ ಕಂಡಾಗ ದೂರವೇ ಉಳಿಯುತ್ತಾರೆ.

ತುರಿಕೆ ಕಾಯಿಯ ಕುರಿತು ಚಿಕ್ಕವರಿದ್ದಾಗ ಶಾಲೆಯ ಮೇಷ್ಟ್ರನ್ನು ಗೋಳು ಹೊಯ್ದ ಘಟನೆಯೊಂದು ನೆನಪಾಗುತ್ತದೆ. ಮಕ್ಕಳಿಗೆ ವಿನಾಕಾರಣ ಹೊಡೆಯುತ್ತಿದ್ದ ಶಿಕ್ಷಕರ ಮೇಲಿನ ಕೋಪಕ್ಕೆ ಹುಡುಗನೊಬ್ಬ ಇದೇ ತುರಿಕೆ ಕಾಯಿ ತಂದು ಮೇಷ್ಟ್ರು ಕುಳಿತುಕೊಳ್ಳುವ ಕುರ್ಚಿಗೆ ಒಮ್ಮೆ ತಾಗಿಸಿ ಒಗೆದಿದ್ದ. ಆ ದಿನ ಕುರ್ಚಿ ಮೇಲೆ ಕುಳಿತ ಶಿಕ್ಷಕರು ದಿನವಿಡೀ ಮೈಕೈ ಕೆರೆದುಕೊಳ್ಳುವುದನ್ನು ನೋಡಿ ಮಕ್ಕಳು ಗುಸುಗುಸು ಮಾಡುತ್ತ ನಕ್ಕಿದ್ದು ಈಗಲೂ ನೆನಪಾಗುತ್ತದೆ.

ತುರಿಕೆ ಕಾಯಿಯ ಸಸ್ಯಶಾಸ್ತ್ರೀಯ ಹೆಸರು ‘ಮುರುನಾ ಪ್ರುರಿಯನ್ಸ್’. ಇದರ ಇಂಗ್ಲಿಷ್ ಹೆಸರು ಕೌಹೇಜ್. ಇದೊಂದು ಕಾಡು ಬಳ್ಳಿಯಾಗಿದ್ದು, ಮಲೆನಾಡು ಭಾಗದಲ್ಲಿ, ಅಲ್ಲಿನ ತೋಟದ ಬೇಲಿಗಳಿಗೆ ಮಳೆಗಾಲದಲ್ಲಿ ಸಹಜವಾಗಿ ಬೆಳೆದಿರುವುದನ್ನು ನೋಡಬಹುದು. ಚಿಕ್ಕ ಚಿಕ್ಕ ರೋಮಗಳನ್ನು ಹೊಂದಿರುವ ಗೊಂಚಲು ಬೀನ್ಸ್‌ಗಳು ಬೇಲಿಯ ಬಳ್ಳಿಯಲ್ಲಿ ಕಂಡರೆ ಮುಟ್ಟದೆ ದೂರವಿದ್ದರೆ ಒಳಿತು. ಮುಟ್ಟಿದರೆ, ಗೊತ್ತಲ್ವಾ ಏನಾಗುತ್ತೆ ಎಂದು.

–ಜಿ.ಎಂ. ಬೊಮ್ನಳ್ಳಿ, ಶಿರಸಿ










## ಕುದುರೆಮುಖದಲ್ಲಿ ಕಡಂಬಿ

ದೇವರ ರುಜುವಿನ ತಾಣ ಕುದುರೆಮುಖ ಶೋಲಾ ಕಾಡು. ನಮ್ಮ ಕರ್ನಾಟಕದ ಪ್ರಕೃತಿ ಸಿರಿಯ ಸುಂದರ ಮಡಿಲು ಪಶ್ಚಿಮ ಘಟ್ಟಗಳು. ಮಂಗಳೂರು ಕುದುರೆಮುಖ ರಸ್ತೆಯ ಪಶ್ಚಿಮ ಘಟ್ಟಗಳ ಕುದುರೆಮುಖ ರಾಷ್ಟ್ರೀಯ ಉದ್ಯಾನದ ‘ಸಿಂಗ್ಸಾರ್ ಶೋಲಾ ಕಾಡನ್ನು’ ವಿಶ್ವ ಪರಂಪರೆಯ ತಾಣವನ್ನಾಗಿ ಘೋಷಿಸಲಾಗಿದೆ. ಇಲ್ಲಿ ಕಂಡುಬರುವ ಗಿರಿ ಶೃಂಗಗಳ ದೃಶ್ಯ ಮನಮೋಹಕವಾಗಿದೆ. ಇದರ ಹಾದಿಯಲ್ಲಿ ಸಿಗುವ ‘ಕಡಂಬಿ’ ಜಲಪಾತ ನಯನ ಮನೋಹರವಾಗಿದೆ. ಅರಣ್ಯ ಇಲಾಖೆಯಿಂದ ಇಲ್ಲಿ ಶೋಲಾ ಕಾಡಿನ ಸಫಾರಿ ಇದೆ. ಕಣ್ಮನ ತಣಿಸುವ ಹಸಿರು, ಶುದ್ಧ ಆಮ್ಲಜನಕವನ್ನು ಒದಗಿಸುವ ತಂಪಾದ ಗಾಳಿ ಹಾಗೂ ರಸ ಋಷಿ ಕುವೆಂಪುರವರು ಭಾವ ತನ್ಮಯರಾಗಿ ಉದ್ಗರಿಸಿದಂತೆ ದೇವರ ರುಜುವನ್ನು ಸಾಕ್ಷಾತ್ಕರಿಸಿಕೊಳ್ಳಲು ಖಂಡಿತ ನೀವಿಲ್ಲಿಗೆ ಭೇಟಿ ನೀಡಬೇಕು.

–ಎಚ್.ಎಸ್. ನವೀನ ಕುಮಾರ್, ಹೊಸದುರ್ಗ